ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು

69 (738) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) :– ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಕಾ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಯೋಚಿಸಲಾಗಿದೆಯೇ ; ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕಿನಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಲಾಗುವುದು. ಇದಕ್ಕಾಗಿ ತಗಲುವ ಅಂದಾಜು ವೆಚ್ಚ ಎಷ್ಟು ಹಾಗೂ ಇದಕ್ಕಾಗಿ ಗುರುತಿಸಿರುವ ಜಾಗಗಳು ಯಾವುವು ;

ಆ) ಬಾಗೇಪಲ್ಲಿ–ಗುಡಿಬಂಡೆ ತಾಲ್ಲೂಕಿನಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಇದುವರೆವಿಗೂ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಸ್ವಾಧೀನಪಡಿಸಿಕೊಂಡಿರುವ ಸ್ಥಳ ಹೊಂದಿದ ರೈತರಿಗೆ ಎಷ್ಟು ಹಣವನ್ನು ನೀಡಲಾಗಿದೆ, ಹಾಗಿದ್ದಲ್ಲಿ, ಯಾವ ಯಾವ ರೈತರಿಗೆ ನೀಡಲಾಗಿದೆ ; (ಸರ್ವೆ ನಂಬರುಗಳವಾರು, ರೈತರವಾರು ವಿವರ ನೀಡುವುದು) ;

ಇ) ಕೈಗಾರಿಕೆ ಸ್ಥಾಪಿಸಲು ಯಾವ ಯಾವ ಮಾನದಂಡವನ್ನು ಆಧರಿಸಿ ಕೈಗಾರಿಕಾ ಪ್ಲಾಟುಗಳನ್ನು ವಿತರಿಸಲಾಗುವುದು ?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಖಾಸಗಿ ವಲಯದ ಮೂಲಕ 79 ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. ಈ ಕೈಗಾರಿಕೆಗಳು ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ, ಚಿಂತಾಮಣಿ, ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ಸ್ಥಾಪನೆಯಾಗಲಿದೆ.

ಇದರಲ್ಲಿ ಸುಮಾರು ರೂ. 21,094.07 ಕೋಟಿ ಮೊತ್ತದ ಬಂಡವಾಳ ಹೂಡಿಕೆಯಾಗಲಿದ್ದು ಸುಮಾರು 49,770 ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ.

ಈ ಕೈಗಾರಿಕೆಗಳು ಚಿಕ್ಕಬಳ್ಳಾಪುರ ತಾಲ್ಲೂಕಿನ ಚಿಕ್ಕಬಳ್ಳಾಪುರ, ಗೊಲ್ಲಹಳ್ಳಿ, ಈರಣ್ಣಹಳ್ಳಿ, ಕುಡವತ್ತಿ, ಚಿಕ್ಕನಾಗವಳ್ಳಿ, ದೊಡ್ಡಕಿರುಗುಂಬಿ, ಚಿಕ್ಕಕಡಿಗೇನಹಳ್ಳಿ, ಅಗಲಗುರ್ಕಿ, ಗೌರಿಬಿದನೂರು ತಾಲ್ಲೂಕಿನ ತೊಂಡೆಬಾವಿ, ಗೌರಿಬಿದನೂರು ಕೈಗಾರಿಕಾ ಪ್ರದೇಶ, ಬಾಗೇಪಲ್ಲಿ ತಾಲ್ಲೂಕಿನ ಬಾಗೇಪಲ್ಲಿ ಕೈಗಾರಿಕಾ ಪ್ರದೇಶ, ಮಾಕಿರೆಡ್ಡಿಪಲ್ಲಿ, ಕೊಂಡರೆಡ್ಡಿಪಲ್ಲಿ, ಹೊಸಹುಡ್ಯ, ಚಿಂತಾಮಣಿ ತಾಲ್ಲೂಕಿನ ಚಿಂತಾಮಣಿ ಕೈಗಾರಿಕಾ ವಸಾಹತ್ತು, ಶಿಡ್ಲಘಟ್ಟ ತಾಲ್ಲೂಕಿನ ತಾಡೂರು ಮುಂತಾದ ಜಾಗಗಳಲ್ಲಿ ಸ್ಥಾಪಿಸಲು ಉದ್ದೇಶಿಸಿವೆ.

ಆ) ಬಾಗೇಪಲ್ಲಿ ತಾಲ್ಲೂಕಿನ ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿನ ಒಟ್ಟು 192 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಈವರೆಗೆ ಸ್ವಾಧೀನಪಡಿಸಿಕೊಳ್ಳಲಾಗಿದೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಭೂ ಮಾಲೀಕರಿಗೆ ಎಕರೆ ಒಂದಕ್ಕೆ ರೂ. 15 ಲಕ್ಷದಂತೆ ರೂ. 16.72 ಕೋಟಿ ಅನುದಾನವನ್ನು ಅಧಿಸೂಚಿತ ಖಾತೆದಾರರಾಗಿರುವ ಭೂ ಮಾಲೀಕರಿಗೆ ನೀಡಲಾಗಿದೆ. ಭೂ ಮಾಲೀಕರ ವಿವರಗಳ ಬಗ್ಗೆ ಅಧಿಸೂಚನೆ ಪ್ರತಿ ಲಗತ್ತಿಸಿದೆ.

ಇ) ಅನುಮೋದನೆಗೊಂಡ ಯೋಜನೆಗಳಿಗೆ ಬೇಕಾದ ಭೂಮಿಯನ್ನು ಹಂಚಿಕೆ ಮಾಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಶಿಫಾರಸ್ಸು ಮಾಡಲಾಗುವುದು. ಯೋಜನೆಗಳಿಗೆ ಅನುಮೋದನೆ ನೀಡುವಾಗ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಲಾಗುವುದು.

1. ಯೋಜನಾ ವೆಚ್ಚ.

2. ಉದ್ಯೋಗಾವಕಾಶ.

3. ಯೋಜನೆಗಳ ಪ್ರವರ್ತಕರ/ಕಂಪನಿಗಳ ಆರ್ಥಿಕ ಸಾಮರ್ಥ್ಯ ಹಾಗೂ ತಾಂತ್ರಿಕ ಹಿನ್ನೆಲೆ.

4. ಹಿಂದಿನ ವಹಿವಾಟು, ಲಾಭಾಂಶ.

5. ಘಟಕದ ಸ್ಥಾಪನೆಗೆ ಹಾಗೂ ವಿಸ್ತರಣೆಗೆ ಅವಶ್ಯಕತೆ ಇರುವ ಭೂಮಿ.

6. ಉದ್ದೇಶಿತ ಉತ್ಪನ್ನ/ಕಾರ್ಯಚಟುವಟಿಕೆ.

7. ತಾಂತ್ರಿಕ ವಿದ್ಯಾರ್ಹತೆ ಉಳ್ಳವರು, ಮಹಿಳಾ ಉದ್ಯಮಿಗಳು, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ಉದ್ಯಮಶೀಲರಿಗೆ ಆದ್ಯತೆ ನೀಡಲಾಗುವುದು.

8. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ 2 ಹೆಕ್ಟೇರ್‌ಗಿಂತ ಅಧಿಕ ಹಾಗೂ ಮೈಸೂರು ಮತ್ತು ಮಂಗಳೂರು ಜಿಲ್ಲೆಗಳಲ್ಲಿ 5 ಹೆಕ್ಟೇರ್‌ಗಿಂತ ಅಧಿಕ ಭೂಮಿ ಅವಶ್ಯವಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಭೂಮಿಯ ಅವಶ್ಯಕತೆಯನ್ನು ಭೂ ಆಡಿಟ್ ಸಮಿತಿಯು ನಿರ್ಧರಿಸುವುದು.

ಅದುದರಿಂದ ಈಗ 1966 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 28(4) ರ(1966ರ ಕರ್ನಾಟಕ ಕಾಯ್ದೆ ಸಂಖ್ಯೆ 18)ರ ಮೇರಿಗೆ ದತ್ತವಾದ ಅಧಿಕಾರದ ಮೇರೆಗೆ ರಾಜ್ಯ ಸರ್ಕಾರ ಕೆಳಗೆ ಪಟ್ಟಿಮಾಡಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ತಿಳಿಸಿರುವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ಘೋಷಿಸಲಾಗಿದೆ.

ತಾಲ್ಲೂಕು: ಬಾಗೇಪಲ್ಲಿ ಹೋಬಳಿ: ಕಸಬಾ ತಾಲ್ಲೂಕು: ಬಾಗೇಪಲ್ಲಿ ಜಿಲ್ಲೆ: ಕೋಲಾರ

ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಪಡಿಸಿಕೊಳ್ಳಬೇಕಾದ ವಿಸ್ತೀರ್ಣ			ತರಹ	ಆಕಾರ (ರೂ)	ಚೆಕ್ಕುಬಂದಿ			
				ಖಿಸ್ ಎ-ಗು	ಖಾಸ್ತು ಎ-ಗು	ಬಾಕಿ ಎ-ಗು			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	
1	ಸರ್ಕಾರಿ	ಸರ್ಕಾರಿ	402/1A1	17-21	17-21	-	-	-	-	-	-	
2	ನಾಗಮ್ಮ ಕೋಂ.ದೊಡ್ಡ ಗಂಗಯ್ಯ	ನಾಗಮ್ಮ	402/1A2	3-00	1-20	1-20	ಖುಷ್ಕಿ	2-52	661	402/1A1	402/1A1	ಕೊತ್ತ ಕೋಟೆಗಡಿ
3	ಹಬೀಬ್ ಬಿನ್ ಖುದಾನ್ ಸಾಬಿ	ಹಬೀಬ್	402/1B	3-11	1-11	2-00	ಖುಷ್ಕಿ	3-36	403	402/1A 1D	402/1C	402/1A
4	ವೈ.ನಾಗರಾಜು ಬಿನ್ ಯಲಿಪರ್ತಿ ವಂಗರಾಜು	ವೈ.ನಾಗರಾಜು	402/1C	4-00	-	4-00	ಖುಷ್ಕಿ	6-71	403	402/1D	645	402/1B
5	ಬಿ.ಹೆಚ್.ಇಸಾಯಿತುಲ್ಲಾ ಬಿನ್ ಮಹಮದ್ ಹುಸೇನ್	ಬಿ.ಹೆಚ್.ಇಸಾಯಿತುಲ್ಲಾ	402/1D	3-00	0-03	2-37	ಖುಷ್ಕಿ	4-92	402/1B, 1C 645	402/1A	402/1A	402/1A
6	ವಂಕಟರಮಣಪ್ಪ ಬಿನ್ ಕ್ಯಾ.ನಾರಾಯಣಪ್ಪ	ವಂಕಟರಮಣಪ್ಪ	402/1E1	2-03	0-03	2-00	ಖುಷ್ಕಿ	3-36	403	402/1A	402/1F	645
7	- - -	- - -	402/1E2	0-37	0-02	0-35	ಖುಷ್ಕಿ	1-48	-	-	-	-
8	ಸರ್ಕಾರಿ	ಸರ್ಕಾರಿ	402/1F	1-11	1-00	0-11	-	-	-	-	-	-
9	ಅಸ್ಮತ್ ಉನ್ನೀಸಾ ಬಿನ್ ಬಾಷುಸಾಬಿ	ಅಸ್ಮತ್ ಉನ್ನೀಸಾ	402/P5	3-00	-	3-00	ಖುಷ್ಕಿ	6-00	401	ಕೊಂಡ ರೆಡ್ಡಿಪಲ್ಲಿ ಗಡಿ	402/1B 1D, 1E	ಕೊತ್ತ ಕೋಟೆಗಡಿ
10	ಪೇಳ್‌ಚಾಂದ್ ಮಿಲಾಫ್ ಬಿನ್ ಮೊಹಮದ್‌ಸಾಬ್	ಪೇಳ್‌ಚಾಂದ್ ಮಿಲಾಫ್	402/2	3-00	-	3-00	ಖುಷ್ಕಿ	5-04	402/1	402/1	402/1	402/1
11	ಗವಿ ಆದಿಲಕ್ಷ್ಮಮ್ಮ ಕೋಂ.ರಾಮಿರೆಡ್ಡಿ ಅಬ್ದುಲ್ ಅಜೀಜ್ ಖಾನ್ ಬಿನ್ ಮೋಹಧೀನ್ ಖಾನ್ ಸುಧಾಲಕ್ಷ್ಮಣ್ ಕೋಂ. ಕೆ.ಎಸ್.ಲಕ್ಷ್ಮಣಗುಪ್ತ	ಗವಿ ಆದಿಲಕ್ಷ್ಮಮ್ಮ ಅಬ್ದುಲ್ ಅಜೀಜ್ ಖಾನ್ ವಂಕಟರಮಣಪ್ಪ ಸುಧಾಲಕ್ಷ್ಮಣ್ ವಂಕಟರಮಣಪ್ಪ	403/P1 403/P2 403/P3 403/P3 403/P4	12-39	12-39	-	-	-	NH7, 647 642	402 668	ಕೊಂಡ ರೆಡ್ಡಿಪಲ್ಲಿ ಗಡಿ	401 641 642

ಸಹಿ/-

12th December 2011

29

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಪಡಿಸಿಕೊಳ್ಳ ಬೇಕಾದ ವಿಸ್ತೀರ್ಣ			ತರಹ	ಆಕಾರ (ರೂ)	ಬೆಳ್ಳುಬಂದಿ			
				ಎಸ್ ಎ-ಗು	ಖರಾಬು ಎ-ಗು	ಬಾಕಿ ಎ-ಗು			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	13
	ಪೇಕಟರಮಣಪ್ಪ ಬಿನ್ ಕಾ. ನಾರಾಯಣಪ್ಪ ಸುಂಕರನರಸಿಂಹಪ್ಪ ಅಮ್ಮಣ್ಣಮ್ಮ ಕೋಂ. ಸುಬ್ಬರಾಜು ಪಾಕೇರಾಬಿ ಬಿನ್ ಮಸ್ತಾನ್‌ವಲಿ	ಸುಂಕರನರ ಸಿಂಹಪ್ಪ ಅಮ್ಮಣ್ಣಮ್ಮ ಪಾಕೇರಾಬಿ	403/P5 403/P6 403/P7 403/P8									
12	ಅಬ್ದುಲ್ ಅಜೀಜ್ ಬಿನ್ ಮಹಮ್ಮದೀನ್ ಖಾನ್	ಅಬ್ದುಲ್ ಅಜೀಜ್	641	3-00	0-06	2-34	ಖುಷ್ಕಿ	5-59	NH 7	642	403 660	401
13	ಅಬ್ದುಲ್ ಅಜೀಜ್ ಬಿನ್ ಮಹಮ್ಮದೀನ್ ಖಾನ್	ಅಬ್ದುಲ್ ಅಜೀಜ್	642	3-00	0-11	2-29	ಖುಷ್ಕಿ	5-35	641	402	403	401
14	ಪೇಕ್ ಅಹಮದ್ ಬಿನ್ ಪೇಕ್ ಪಕ್ಕೀರ್ದೀನ್	ಪೇಕ್ ಅಹಮದ್	643P	2-26	0-08	2-18	ಖುಷ್ಕಿ	3-75	NH-7	647	403	403
15	-	-	645	2-00	-	2-00	ಖುಷ್ಕಿ	3-36	668	402	402	402
16	ತಿಮ್ಮಪ್ಪ ಬಿನ್ ಲಕ್ಕಪ್ಪ	ತಿಮ್ಮಪ್ಪ ಎ.ವಿ.ಹೂಜಪ್ಪ	647	3-19	0-03	3-16	ಖುಷ್ಕಿ	6-97	NH-7, 643	403	403	403
17	ಪಹಣಿ ಲಭ್ಯವಿರುವುದಿಲ್ಲ	-	650/P	1-23	0-04	1-19	ಖುಷ್ಕಿ	6-70	NH-7	402	403	641 642 643
18	ಸರ್ಕಾರಿ	ಸರ್ಕಾರಿ	651	3-06	3-06	-	-	-	-	-	-	-
19	ಪಹಣಿ ಲಭ್ಯವಿರುವುದಿಲ್ಲ	-	668	3-09	0-04	3-05	ಖುಷ್ಕಿ	5-69	403	402 645	403	403
			ಒಟ್ಟು	75-05	38-21	37-24						

ಮ: ಕೊಂಡರಹಳ್ಳಿ ಹೋಬಳಿ: ಕನಬಾ ತಾಲ್ಲೂಕು: ಬಾಗೇಪಲ್ಲಿ ಜಿಲ್ಲೆ: ಕೋಲಾರ

ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಪಡಿಸಿಕೊಳ್ಳ ಬೇಕಾದ ವಿಸ್ತೀರ್ಣ			ಸರಾಸರಿ	ಆಕಾರ (ರೂ)	ಚೆಕ್ಕುಬಂದಿ			
			ಎನ್ ಎ-ಗು	ಖಾಬ್ಲು ಎ-ಗು	ಬಾಕಿ ಎ-ಗು			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
2.	3	4	5	6	7	8	9	10	11	12	13
ಸರ್ಕಾರಿ	ಸರ್ಕಾರಿ	33/P	10-00	10-00	-	-	-	-	-	-	-
ಚಿಕ್ಕನರಸಿಂಹ ಬಿನ್ ಚಿಕ್ಕನರಸಪ್ಪ ಲಕ್ಷ್ಮಿಮ್ಮ, ಕೋಂ ರಾಮಪ್ಪ, ಕದರಿ ನರಸಿಂದಪ್ಪ ಬಿನ್ ಸಂಜೀವಮ್ಮ ವಿ.ವಿಜಯಕುಮಾರ್ ಬಿನ್ ಮಾನಿಕಪ್ಪ ಚಂದ್ರಮೌಳಿ ಬಿನ್ ಲೇ.ಸೀತಾಪತಿರಾವ್ ಟಿ.ಎನ್.ಭಾಸ್ಕರಲಿಂಗಾರೆಡ್ಡಿ ಬಿನ್ ನಿಮ್ಮಾರೆಡ್ಡಿ ಸಿ.ಜಯಸಿಂಹರೆಡ್ಡಿ ಬಿನ್ ಲೇ.ಚಿನಪ್ಪರೆಡ್ಡಿ ಕೆ.ಸಾಗಾನಂದರೆಡ್ಡಿ ಬಿನ್ ಲೇ.ಕೆ. ತಿಮ್ಮಾರೆಡ್ಡಿ ಸುಮಸಂ ಸುಲ್ತಾನ ಕೋಂ. ಅಯಿಷ್‌ಸಾಬ್, ಫಾಹೀದಾಬಾನು ಕೋಂ.ಮಹಮದ್ ರಫಿ ಅಬ್ದುಖ್ ಬಾಷ ಬಿನ್ ಅಬ್ದುಲ್ ಜಾಬರ್, ಮಹಮದ್ ರಫಿ ಬಿನ್ ಕರೀಂಜಾನ್, ಮೆಹಕಾಜ್ ಬಿನ್ ಮಹಮದ್ ಇಬ್ರಾಹಿಂ, ಫೈರೋಜ್ ಸುಮಸಾ ಕೋಂ.ಚಾಂದ್ ಬಾಷ ಸೈಯದ್ ಕಲೀಂಉಲ್ಲಾ ಬಿನ್ ಸುಹಮದ್ ಸೈಯದ್, ಮಬೀನ್‌ತಾಜ್ ಕೋಂ. ವಜೀರ್ ಅಹಮದ್ ಅಮೀರ್ ಬಿನ್ ಹುಸೇನ್ ಸಾಬ್ ನಜೀರ್ ಅಹಮದ್ ಬಿನ್ ಸಿಬ್.ಕೆ.ಸುಭಾನ್‌ಸಾಬ್	ಚಿಕ್ಕನರಸಿಂಹ ಆವುಲಮ್ಮ ಕದರಿನರಸಿಂಹಪ್ಪ ಎ.ವಿಜಯಕುಮಾರ್ ಆದಿನಾರಾಯಣಪ್ಪ ಬಯ್ಯಣ್ಣ, ಸಾವಿತ್ರಮ್ಮ ಶಿವಪ್ಪ, ಸುಂದರಮ್ಮ ಅಲ್ಲೀಮಾಬಾನು ನಾಗಭೂಷಣ ಖಪೀರ್‌ಸಾಬ್	33/P1 33/P2	8-18	8-18	-	ಖುಷ್ಕಿ	15-50	270 227 ರಸ್ತೆ	39 283 269	ರಸ್ತೆ	299

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಪಡಿಸಿಕೊಳ್ಳಬೇಕಾದ ವಿಸ್ತೀರ್ಣ			ತರಹ	ಆಕಾರ (ರೂ)	ಹದ್ದುಬಸ್ತು			
				ಏಸ್ ಎ-ಗು	ಖರಾಬು ಎ-ಗು	ಬಾಕಿ ಎ-ಗು			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	13
	ಬಿನ್ ಸಾಬ್ ಕೋಂ. ಸಣ್ಣಯ್ಯಾಚಾರ											
	ದ್ ಖಾನ್ ಬಿನ್ ಮಾನಂಗಾಖಾನ್											
	ಮ್ಮ ಕೋಂ. ರಂಗಸ್ವಾಮಿ											
	ಲಿಂಗಯ್ಯ ಬಿನ್ ಬಯ್ಯಪ್ಪ											
	ಬಸವಲಿಂಗಪ್ಪ ಬಿನ್ ಬಂಕಪ್ಪ											
	ದಾನಪ್ಪ ಬಿನ್ ಬಂಗಪ್ಪ											
	ಚಂದ್ರಮಾಚಪ್ಪ ಬಿನ್ ಈರಾಚಾರಿಯಪ್ಪ											
	ಯಪ್ಪ ಬಿನ್ ಜಿಂಕಪ್ಪ ಮಡ್ಡಯ್ಯ											
	ಸಾಬಮ್ಮ ಕೋಂ ಬಿ.ಸೋಮಾಚಾರಿ											
	ಬಸವಲಿಂಗಪ್ಪ ಬಸಪ್ಪ ಬಿನ್ ಸಂಗಯ್ಯಾಖಾನ್											
	ಮದ್ ಸಾಹೀಬ್ ಉಲ್ಲಾ ಬಿನ್											
	ಮ್ಮದ್ ಬಬ್ಬಾಲ್ ಸಾಬ್											
	ಸೀನಾ ಕೋಂ. ಸಮೀವುಲ್ಲಾ											
	ಂದ್ ಗುಸ್ಸೇನ್											
	ನ್ ಸ್ಮಂಕುದ್ ಮುಯಹುದ್.											
	ಗಂಡಪ್ಪುಜಿ ಕೋಂ ಮುಂಬುಗಾಳಿ.											
	ಮೂರ್ತಿ ಬಿನ್ ಆರುಣಪ್ಪ											
	ನಿಂಗಪ್ಪಮ್ಮ ಕೋಂ. ಬಿ.ವಿರಕ್ಕಪ್ಪ.											
	ಬಾಯಪ್ಪಮ್ಮ ಕೋಂ. ಗುರುಮೂರ್ತಿ.											
	ಮುನ್ನೀಸಾ ಕೋಂ. ಸಾಬ್ ಜಾನ್											
	ಬಿಲ್.ವಿ.ಬಾಬು ಬಿನ್											
	ಗಾದಪ್ಪಮ್ಮ, ಅನ್ನಪ್ಪಮ್ಮ ಕೋಂ.											
	ಯಪ್ಪ, ಶಿವಪ್ಪ ಬಿನ್											
	ಸುಂದರಮ್ಮ ಬಿನ್ ಸೀಸಪ್ಪ											
	ಬಾಬು ಕೋಂ.ಬೃಹಾನಿ											
	ಬಿನ್ ಕ.ನಾರಾಯಣಚಾರಿ											
	ಬಿನ್ ಅಹ್ಮದ್‌ಸಾಬ್											

ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವ ನಂ	ಭೂಸ್ವಾಧೀನಪಡಿಸಿಕೊಳ್ಳ ಬೇಕಾದ ವಿಸ್ತೀರ್ಣ			ತರಹೆ	ಆಕಾರ (ರೂ)	ಚೆಕ್ಕುಬಂದಿ			
				ಏಸ್ ಎ-ಗು	ಖರಾಬು ಎ-ಗು	ಬಾಕಿ ಎ-ಗು			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	13
12	ವೆಂಕಟಲಕ್ಷ್ಮಮ್ಮ ಕೋಂ. [illegible]	ವೆಂಕಟಲಕ್ಷ್ಮಮ್ಮ ಎಸ್.ಸಿದ್ದರಾಮಪ್ಪ	228	4-00	0-14	3-26	ಖುಷ್ಕಿ	7-16	46	46	298	46
13	[illegible] ಕೋಂ. ಸೈಯದ್ ಆಲೀಂ	ರಮೀಜಾ	269	2-35	0-05	2-30	ಖುಷ್ಕಿ	5-39	33	289 290	283 33	33
14	ಅಬ್ದುಲ್ ಬಷೀರ್ ಬಸ್ ಅಬ್ದುಲ್ ಖಾದರ್	ಅಬ್ದುಲ್ ಬಷೀರ್	270P	1-25	-	1-25	ಖುಷ್ಕಿ	6-00	ರಸ್ತೆ	33	33	299
15	ಬ್ಯಾಳ್ಳ ಬಸ್ ರಾಮಪ್ಪ	ಓಬಳಪ್ಪ	279	1-20	0-03	1-17	ಖುಷ್ಕಿ	2-80	289	45	290	297
16	[illegible] ಕೋಂ. ಲೇ. [illegible] [illegible] [illegible] [illegible] ಸುಭದ್ರಮ್ಮ ಬಸ್ ಲೇ.ಕೊಂಡಪ್ಪ	ಸಂಜಮ್ಮ ಚಲಪತಾಚಾರಿ ವೆಂಕಟರಮಣಾಚಾರಿ ಸುಭದ್ರಮ್ಮ	283	7-05	2-00	5-05	ಖುಷ್ಕಿ	10-05	33	39	33	269
17	ಸಂಜುಂಡಪ್ಪ ಬಸ್ ಸಂಜಪ್ಪ	ಸಂಜುಂಡಪ್ಪ	286	3-00	-	3-00	ಖುಷ್ಕಿ	5-88	46	47	297	46
18	ದೊಡ್ಡಹನುಮಯ್ಯ ಬಸ್ ನರಸಪ್ಪ	ದೊಡ್ಡಹನುಮಯ್ಯ	287	3-09	0-09	3-00	ಖುಷ್ಕಿ	5-88	46	46	297 298	288
19	ಗೋಪನ್ನ ಬಸ್ ವೆಂಕಟಪ್ಪ	ಗೋಪನ್ನ	288	3-00	-	3-00	ಖುಷ್ಕಿ	5-88	46	46	46 287	46
20	ಸಯಾನ್ ಖಾಸಿ ಬಸ್ ದಾದೂಸಾಬಿ		289/1	0-02	-	0-02	ಖುಷ್ಕಿ	0-09	269	298	289/2	298
21	ವಿಜಯಾಬಾಯಿ ಕೋಂ. ಲೇ.ಸೈಯದ್ [illegible]		289/2	2-00	-	2-00	ಖುಷ್ಕಿ	3-92	269, 33	298	279	298/1
22	ಸರ್ಕಾರಿ	ಸರ್ಕಾರಿ	290	1-07	1-07	-	-	-	-	-	-	-

ಕ್ರ ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಮ್ಯಾಧೀನಪಡಿಸಿಕೊಳ್ಳಬೇಕಾದ ವಿಸ್ತೀರ್ಣ ಎಸ್ ಎ-ಗು	ಖರಾಬು ಎ-ಗು	ಬಾಕಿ ಎ-ಗು	ಪರಭು	ಆಕಾರ (ರೂ)	ಚೆಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	13
23	ಆರ್.ಸುನೀತಾ ಕೋಂ. ವಿ.ಇಂದ್ರಶೇಖರರೆಡ್ಡಿ	ಆರ್.ಸುನೀತಾ	297	2-34	0-06	2-28	ಖುಷ್ಕಿ	5-20	298	45	279	286 287
24	ಎಂ.ಶಿವಶಂಕರಯ್ಯ, ಬಿನ್ ಎಂ.ಆಂಜನೇಯಪ್ಪ	ಎಂ.ಶಿವಶಂಕರಯ್ಯ.	298	3-00	-	3-00	ಖುಷ್ಕಿ	5-88	299	297	289	287 46 228
25	ಕೆ.ಬಿ.ಆದಿನಾರಾಯಣಪ್ಪ ಬಿನ್ ಲೇ:ಬೈಯನ್ನ, ಎನ್.ಲಕ್ಷ್ಮಿನರಸಮ್ಮ, ಕೋಂ ವಿಷ್ಣುವರ್ಧನರಡ್ಡಿ	ಕೆ.ಬಿ.ಆದಿನಾರಾಯಣಪ್ಪ ಎನ್.ಲಕ್ಷ್ಮಿನರಸಮ್ಮ	299	4-11	0-11	4-00	ಖುಷ್ಕಿ	7-84	ಬಾಗೇಪಲ್ಲಿ ಗಡಿ	298	33 270	300
26	ಸರ್ಕಾರ	ಸರ್ಕಾರಿ	300	3-10	3-10	-	-	-	-	-	-	-
			ಒಟ್ಟು:	115-35	41-39	73-36						

ಹೋಬಳಿ

ಕ್ರ.ಸಂ	ಗ್ರಾಮ	ಒಟ್ಟು ವಿಸ್ತೀರ್ಣ ಎ-ಗು	ಖರಾಬು ಎ-ಗು	ಬಾಕಿ ಎ-ಗು
1)	ಬಾಗೇಪಲ್ಲಿ	76-05	38-21	37-24
2)	ಕೊಂಡರೆಡ್ಡಿಪಲ್ಲಿ	115-35	41-39	73-36
	ಒಟ್ಟು:	192-00	80-20	111-20

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ಕುಮಾರಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ (ಕೈಆ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್.191

ಕರ್ನಾಟಕ ರಾಜ್ಯಪತ್ರ, ಗುರುವಾರ, ಮಾರ್ಚ್ ೪, ೨೦೦೨

ಭಾಗ: ೪ಎ(೨)ಪರಿಷ್ಕೃತ ಪಟ್ಟಿ ಪ್ರಕಟಣೆ: ಪೂರಕ ಭಾಗ: ಕಾಯ್ದೆಗಳು ಜಿಲ್ಲೆ: ಕೋಲಾರ

ಕ್ರ. ಸಂ	ಭೂತಪೂರ್ವ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಪಡಿಸಿಕೊಳ್ಳಬೇಕಾದ ವಿಸ್ತೀರ್ಣ			ಷರಾ	ಪರಿಹಾರ (ರೂ)	ಚಿಕ್ಕಬಂದಿ			
				ಎಕರೆ	ಗುಂಟೆ	ಆಣೆ			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	13
1	ಸರ್ಕಾರಿ	ಸರ್ಕಾರಿ	33/P	10-00	10-00	-	-	-	-	-	-	-
2	ಚಿಕ್ಕನರಸಿಂಹ ಬಿನ್ ಚಿಕ್ಕನರಸಪ್ಪ ಗೌರಮ್ಮ ಕೋಂ ರಾಮಪ್ಪ, ಕದರಿ ನರಸಿಂಹಪ್ಪ ಬಿನ್ ಸಂಜೀವಮ್ಮ ವಿ.ನಿಜಲಿಂಗಕುಮಾರ್ ಬಿನ್ ಮಾನಿಕಪ್ಪ ಚಂದ್ರಮೌಳಿ ಬಿನ್ ಲೇ.ಸೀತಾಪತಿರಾವ್ ವಿ.ಎನ್.ರಾಮಲಿಂಗಾರೆಡ್ಡಿ ಬಿನ್ ನಿಸ್ಸಾರೆಡ್ಡಿ ಸಿ.ಭಯ್ಯಾರೆಡ್ಡಿ ಬಿನ್ ಲೇ.ಚಿನಪ್ಪರೆಡ್ಡಿ ಕೆ.ಸಾಗಾನರೆಡ್ಡಿ ಬಿನ್ ಲೇ.ಕೆ. ತಿಮ್ಮಾರೆಡ್ಡಿ ಸಯ್ಯದ ಸುಲ್ತಾನ ಕೋಂ. ಅಯ್ಯೂಬ್‌ಸಾಬ್, ಬಾಹೀದಾಬಾನು ಕೋಂ.ಮಹಮದ್ ರಫಿ ಅಬ್ರಾಹಂ ಬಾಷ ಬಿನ್ ಅಬ್ದುಲ್ ಖಾದರ್, ಮಹಮದ್ ರಫಿ ಬಿನ್ ಕರೀಂಖಾನ್, ಮಹಬಾಷ್ ಬಿನ್ ಮಹಮದ್ ಇಬ್ರಾಹಿಂ, ಫೈರೋಜ್ ಬಾನು ಕೋಂ.ಚಾಂದ್ ಬಾಷ ಸೈಯದ್ ಕಲೀಂಉಲ್ಲಾ ಬಿನ್ ಸೈಯದ್ ಸೈಯದ್, ಮಬೀನ್‌ಬಾಜ್ ಕೋಂ. ವಜೀರ್ ಅಹಮದ್ ಖಾನೀರ್ ಬಿನ್ ಹುಸೇನ್ ಸಾಬ್ ನಜೀರ್ ಅಯಮದ್ ಬಿನ್ ಜೆಲ್.ಕೆ.ಮಹಬೂಬ್‌ಸಾಬ್	ಚಿಕ್ಕನರಸಿಂಹ ಅವುಲಮ್ಮ ಕದರಿನರಸಿಂಹಪ್ಪ ವಿ.ವಿಜಯಕುಮಾರ್ ಅದಿನಾರಾಯಣಪ್ಪ ಬಯ್ಯಾಗ್ನಿ, ಸಾವಿತ್ರಮ್ಮ ಶಿವಪ್ಪ, ಸುಂದರಮ್ಮ ಅಲ್ಲೇಮಾಬಾನು ನಾಗಭೂಷಣ ಖಜೀರ್‌ಸಾಬ್	33/P1 33/P2	8-18	8-18	-	ಖುಷ್ಕಿ	15-50	270 227 ರಸ್ತೆ	39 283 269	ರಸ್ತೆ	299

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಪಡಿಸಿಕೊಳ್ಳಬೇಕಾದ ವಿಸ್ತೀರ್ಣ			ತರಹ	ಆಕಾರ (ರೂ)	ಬೆಳ್ಳುಬಂಡಿ			
				ಎಸ್ ಎ-ಗು	ಖರಾಬು ಎ-ಗು	ಬಾಕಿ ಎ-ಗು			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	13
	ವೆಂಕಟರಮಣಪ್ಪ ಬಿನ್ ಕಾ. ನಂಜಾಯಣಪ್ಪ ಸುಬ್ಬರಾಯಪ್ಪ ಅಮ್ಮಕ್ಕಮ್ಮ ಕೋಂ. ಸುಬ್ಬರಾಯು ಪಾತಕರಾಬಿ ಬಿನ್ ಮಸ್ತಾನ್‌ವಲಿ	ಸುಂಕರನರ ಸಿಂಹಪ್ಪ ಅಮ್ಮಕ್ಕಮ್ಮ ಪಾತಕರಾಬಿ	403/P5 403/P6 403/P7 403/P8									
1·2	ಅಬ್ದುಲ್ ಅಜೀಜ್ ಬಿನ್ ಮೊಹಿದೀನ್ ಖಾನ್	ಅಬ್ದುಲ್ ಅಜೀಜ್	641	3-00	0-06	2-34	ಖುಷ್ಕಿ	5-59	NH 7	642	403 650	401
1·3	ಅಬ್ದುಲ್ ಅಜೀಜ್ ಬಿನ್ ಮೊಹಿದೀನ್ ಖಾನ್	ಅಬ್ದುಲ್ ಅಜೀಜ್	642	3-00	0-11	2-29	ಖುಷ್ಕಿ	5-35	641	402	403	401
1·4	ಪೀಕ್ ಅಹಮದ್ ಬಿನ್ ಪೀಕ್ ಮಹಿದ್ದೀನ್	ಪೀಕ್ ಅಹಮದ್	643P	2-26	0-08	2-18	ಖುಷ್ಕಿ	3-75	NH-7	647	408	403
1·5	-	-	645	2-00	-	2-00	ಖುಷ್ಕಿ	3-36	668	402	402	402
1·6	ತಿಮ್ಮಪ್ಪ ಬಿನ್ ಲಕ್ಷ್ಮಣ್ಣ	ತಿಮ್ಮಪ್ಪ ಎ.ವಿ.ಪೂಜಪ್ಪ	647	3-19	0-03	3-16	ಖುಷ್ಕಿ	6-97	NH-7, 643	403	403	403
1·7	ಪರಾಂ ಲಭ್ಯವಿರುವುದಿಲ್ಲ	-.	650/P	1-23	0-04	1-19	ಖುಷ್ಕಿ	6-70	NH-7	402	403	644 645
1·8	ಸರ್ಕಾರಿ	ಸರ್ಕಾರಿ	651	3-06	3-06	-	-	-	-	-	-	-
1·9	ಪರಾಂ ಲಭ್ಯವಿರುವುದಿಲ್ಲ	-	668	3-09	0-04	3-05	ಖುಷ್ಕಿ	5-69	403	402 645	403	403
			ಒಟ್ಟು	76-05	38-21	37-24						

ಅದುರಿಂದ ಈಗ 1966 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 28(4) ರ (1966ರ ಕರ್ನಾಟಕ ಕಾಯ್ದೆ ಸಂಖ್ಯೆ 18)ರ ಮೇರಿಗೆ ದತ್ತವಾದ ಅಧಿಕಾರದ ಮೇರಿಗೆ ರ್ನಾಟಕ ಸರ್ಕಾರ ಕೆಳಗೆ ಸಮೂಹದಿಸಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ತಿಳಿಸಿರುವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ಘೋಷಿಸಲಾಗಿದೆ.

ಮು: ಬಾಗೇಪಲ್ಲಿ ಹೋಬಳಿ: ಕಸಬಾ ತಾಲ್ಲೂಕು: ಬಾಗೇಪಲ್ಲಿ ಜಿಲ್ಲೆ: ಕೋಲಾರ

ಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ಸಂ	ಭೂಸ್ವಾಧೀನಪಡಿಸಿಕೊಳ್ಳಬೇಕಾದ ವಿಸ್ತೀರ್ಣ			ಕರಡು	ಆಕಾರ (ರೂ)	ಬೆಳ್ಳಬಂದಿ			
				ಮಿನ್ ಎ-ಗು	ಖಾಸ್ ಎ-ಗು	ಬಾಕಿ ಎ-ಗು			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	
1.	ಸರ್ಕಾರಿ	ಸರ್ಕಾರಿ	402/1A1	17-21	17-21	-	-	-	-	-	-	
2	ನಾಗಮ್ಮ ಕೋಂ. ದೊಬ ಗಂಗಯ್ಯ	ನಾಗಮ್ಮ	402/1A2	3-00	1-20	1-20	ಖುಷ್ಕಿ	2-52	661	402/1A1	402/1A1	ಕೊಂಡ ರೆಡ್ಡಿಪಲ್ಲಿ ಗಡಿ
3	ಪಬೀಬೆ ಬಿನ್ ಖುದಾನ್ ಸಾಬಿ	ಪಬೀಬೆ	402/1B	3-11	1-11	2-00	ಖುಷ್ಕಿ	3-36	403	402/1A 1D	402/1C	402/1A
4	ವೈ.ನಾಗರಾಜು ಬಿನ್ ಯಲಿಪರ್ತಿ ದಂಗ್ಗರಾಜು	ವೈ.ನಾಗರಾಜು	402/1C	4-00	-	4-00	ಖುಷ್ಕಿ	6-71	403	402/1D	645	402/1B 1D
5	ಬಿ.ಹೆಚ್.ಇನಾಯಿತುಲ್ಲಾ ಬಿನ್ ಮಜ್ಹಮುದ್ ಹುಸೇನ್	ಬಿ.ಹೆಚ್.ಇನಾಯಿತುಲ್ಲಾ	402/1D	3-00	0-03	2-37	ಖುಷ್ಕಿ	4-92	402/1B, 1C 645	402/1A	402/1A	402/1A
6.	ವಂಕಟರಮಣಪ್ಪ ಬಿನ್ ಚ್ಯಾನಾರಾಯಣಪ್ಪ	ವಂಕಟರಮಣಪ್ಪ	402/1E1	2-03	0-03	2-00	ಖುಷ್ಕಿ	3-36	403	402/1A	402/1F	645
7	- - -	- - -	402/1E2	0-37	0-02	0-35	ಖುಷ್ಕಿ	1-48	-	-	-	-
8	ಸರ್ಕಾರಿ	ಸರ್ಕಾರಿ	402/1F	1-11	1-00	0-11	-	-	-	-	-	-
9	ಅಸ್ಮತ್ ಬಿನ್ನೀಸಾ ಬಿನ್ ಬಾಷುಸಾಬಿ	ಅಸ್ಮತ್ ಉನ್ನೀಸಾ	402/P5	3-00	-	3-00	ಖುಷ್ಕಿ	6-00	401	ಕೊಂಡ ರೆಡ್ಡಿಪಲ್ಲಿ ಗಡಿ	402/1B 1D, 1E	ಕೊತ್ತ ಕೋಟಗಡಿ
10	ಪೇಕ್‌ಬಾಂದ್ ಮಿಲಾಫ್ ಬಿನ್ ಮೊಹಮದ್‌ಸಾಬ್	ಪೇಕ್‌ಬಾಂದ್ ಮಿಲಾಫ್	402/2	3-00	-	3-00	ಖುಷ್ಕಿ	5-04	402/1	402/1	402/1	402/1
11	ಗವಿ ಆದಿಲಕ್ಷ್ಮಮ್ಮ ಕೋಂ.ರಾಮಿರೆಡ್ಡಿ ಅಬ್ದುಲ್ ಅಜೀಜ್ ಖಾನ್ ಬಿನ್ ಮೋಹಿದೀನ್ ಖಾನ್ ಸುಧಾಲಕ್ಷ್ಮಣ್ ಕೋಂ. ಕೆ.ವಿಸ್.ಲಕ್ಷ್ಮಣಗುಪ್ತ	ಗವಿ ಆದಿಲಕ್ಷ್ಮಮ್ಮ ಅಬ್ದುಲ್ ಅಜೀಜ್ ಖಾನ್ ವಂಕಟರಮಣಪ್ಪ ಸುಧಾಲಕ್ಷ್ಮಣ್ ವಂಕಟರಮಣಪ್ಪ	403/P1 403/P2 403/P3 403/P3 403/P4	12-00	12-00	-	-	-	NH7, 647 642	402 668	ಕೊಂಡ ರೆಡ್ಡಿಪಲ್ಲಿ ಗಡಿ	401 641 642

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ ಸಿಐ 33 ಎಸ್‌ಪಿಕ್ಯೂ 2007, ಬೆಂಗಳೂರು ದಿನಾಂಕ : 7ನೇ ಫೆಬ್ರವರಿ 2007

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 4ರ ಮೇರೆಗೆ

ಕೋಲಾರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು, ಕಸಬಾ ಹೋಬಳಿ, ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿನ ಈ ಕೆಳಕಂಡ ಸರ್ವೆ ನಂ. ಮತ್ತು ವಿಸ್ತೀರ್ಣ ಜಮೀನನ್ನು ಕರ್ನಾಟಕ ಸರ್ಕಾರವು ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 3(1) 1(3) ಮತ್ತು 28(1) ಅಧಿಸೂಚನೆ ಸಂಖ್ಯೆ : ಸಿಐ 476 ಎಸ್‌ಪಿಕ್ಯೂ 2006, ದಿನಾಂಕ : 09–11–2006ರ ಪ್ರಕಾರ ಅನುಮೋದನೆಗೊಂಡು ದಿನಾಂಕ : 10–11–2006ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆ ಭಾಗ–3ರ (ನಂ.1494) ಪುಟ ಸಂಖ್ಯೆ 1 ರಿಂದ 14ರ ವರೆಗೆ ಪ್ರಕಟಿಸಲಾಗಿದೆ.

ಈ ಕೆಳಕಂಡ ಸದರಿ ಜಮೀನು ಸರ್ಕಾರಕ್ಕೆ ಅವಶ್ಯಕತೆ ಇಲ್ಲದ ಕಾರಣ ಜಮೀನನ್ನು ಸ್ವಾಧೀನ ಕ್ರಮದಿಂದ ಕೈಬಿಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 4 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 3(1) 1(3) ಮತ್ತು 28(1)ರ ಅಧಿಸೂಚನೆಯಿಂದ ಸದರಿ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

ಗ್ರಾಮ : ಕೊಂಡರೆಡ್ಡಿಪಲ್ಲಿ

ಕ್ರ.ಸಂ.	ಸರ್ವೆ ನಂ.	ವಿಸ್ತೀರ್ಣ ಎ–ಗು
1	2	3
1.	227	3–37
2.	45/ಪಿ	2–00

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ ಕುಮಾರಸ್ವಾಮಿ,

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ ಸಿಐ 33 ಎಸ್‌ಪಿಕ್ಯೂ 2007, ಬೆಂಗಳೂರು ದಿನಾಂಕ : 7ನೇ ಫೆಬ್ರವರಿ 2007

ವಿಧಿ 28(4)ರ ಅಧಿಸೂಚನೆ

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ (1966ರ ಕರ್ನಾಟಕ ಕಾಯ್ದೆ ಸಂಖ್ಯೆ : 18) ವಿಧಿ 28(1)ರ ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ದಿನಾಂಕ : 09–11–2006ರ ಅಧಿಸೂಚನೆ, ಕರ್ನಾಟಕ ವಿಶೇಷ ರಾಜ್ಯ ಪತ್ರ ಭಾಗ–3ರ ವಿಶೇಷ ಪತ್ರಿಕೆ ಪುಟ ಸಂಖ್ಯೆ 1 ರಿಂದ 14 ರಲ್ಲಿ ಪ್ರಕಟವಾಗಿರುವ ಅಧಿಸೂಚನೆ ಸಂಖ್ಯೆ : ಸಿಐ 476 ಎಸ್.ಪಿ.ಕ್ಯೂ. 2006 ದಿನಾಂಕ : 09–11–2006ರ ಭೂಸ್ವಾಧೀನಕ್ಕೆ ಒಳಪಟ್ಟ ಪ್ರದೇಶದ ಪ್ರಕಾರ ಸರ್ಕಾರ ಸದರಿ ಅಧಿಸೂಚನೆಯಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಇದೇ ಅಧಿಸೂಚನೆಯಲ್ಲಿ ಹೇಳಿರುವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಇಚ್ಛೆಪಟ್ಟಿದೆ.

ಮೇಲ್ಕಂಡ ಅಧಿಸೂಚನೆಯ ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಪ್ರಕಟಿಸಲಾಗಿರುವ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವುದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿದೆ. ಈ ಬಗ್ಗೆ ಮೇಲ್ಕಂಡ ಕಾಯ್ದೆ ವಿಧಿ 28(3)ರ ಪ್ರಕಾರ ಆದೇಶ ಹೊರಡಿಸಲಾಗಿದೆ.

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ ಸಿಐ 33 ಎಸ್‌ಪಿಕ್ಯೂ 2007, ಬೆಂಗಳೂರು ದಿನಾಂಕ : 7ನೇ ಫೆಬ್ರವರಿ 2007

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 4ರ ಮೇರೆಗೆ

ಕೋಲಾರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು, ಕಸಬಾ ಹೋಬಳಿ, ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿನ ಈ ಕೆಳಕಂಡ ಸರ್ವೆ ನಂ. ಮತ್ತು ವಿಸ್ತೀರ್ಣ ಜಮೀನನ್ನು ಕರ್ನಾಟಕ ಸರ್ಕಾರವು ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 3(1) 1(3) ಮತ್ತು 28(1) ಅಧಿಸೂಚನೆ ಸಂಖ್ಯೆ : ಸಿಐ 476 ಎಸ್‌ಪಿಕ್ಯೂ 2006, ದಿನಾಂಕ : 09–11–2006ರ ಪ್ರಕಾರ ಅನುಮೋದನೆಗೊಂಡು

ದಿನಾಂಕ : 10–11–2006ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆ ಭಾಗ–3ರ (ನಂ.1494) ಪುಟ ಸಂಖ್ಯೆ 1 ರಿಂದ 14ರ ವರೆಗೆ ಪ್ರಕಟಿಸಲಾಗಿದೆ.

ಈ ಕೆಳಕಂಡ ಸದರಿ ಜಮೀನು ಸರ್ಕಾರಕ್ಕೆ ಅವಶ್ಯಕತೆ ಇಲ್ಲದ ಕಾರಣ ಜಮೀನನ್ನು ಸ್ವಾಧೀನ ಕ್ರಮದಿಂದ ಕೈಬಿಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 4 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 3(1) 1(3) ಮತ್ತು 28(1)ರ ಅಧಿಸೂಚನೆಯಿಂದ ಸದರಿ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ.

ಗ್ರಾಮ : ಕೊಂಡರೆಡ್ಡಿಪಲ್ಲಿ

ಕ್ರ.ಸಂ.	ಸರ್ವೆ ನಂ.	ವಿಸ್ತೀರ್ಣ ಎ–ಗು
1	2	3
1.	227	3–37
2.	45/ಪಿ	2–00

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ ಕುಮಾರಸ್ವಾಮಿ,

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ ಸಿಐ 33 ಎಸ್‌ಪಿಕ್ಯೂ 2007, ಬೆಂಗಳೂರು ದಿನಾಂಕ : 7ನೇ ಫೆಬ್ರವರಿ 2007

ವಿಧಿ 28(4)ರ ಅಧಿಸೂಚನೆ

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ (1966ರ ಕರ್ನಾಟಕ ಕಾಯ್ದೆ ಸಂಖ್ಯೆ : 18) ವಿಧಿ 28(1)ರ ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ದಿನಾಂಕ : 09–11–2006ರ ಅಧಿಸೂಚನೆ, ಕರ್ನಾಟಕ ವಿಶೇಷ ರಾಜ್ಯ ಪತ್ರ ಭಾಗ–3ರ ವಿಶೇಷ

ಪತ್ರಿಕೆ ಪುಟ ಸಂಖ್ಯೆ 1 ರಿಂದ 14 ರಲ್ಲಿ ಪ್ರಕಟವಾಗಿರುವ ಅಧಿಸೂಚನೆ ಸಂಖ್ಯೆ : ಸಿಐ 476 ಎಸ್.ಪಿ.ಕ್ಯೂ. 2006 ದಿನಾಂಕ : 09-11-2006ರ ಭೂಸ್ವಾಧೀನಕ್ಕೆ ಒಳಪಟ್ಟ ಪ್ರದೇಶದ ಪ್ರಕಾರ ಸರ್ಕಾರ ಸದರಿ ಅಧಿಸೂಚನೆಯಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಇದೇ ಅಧಿಸೂಚನೆಯಲ್ಲಿ ಹೇಳಿರುವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಇಚ್ಛೆಪಟ್ಟಿದೆ.

ಮೇಲ್ಕಂಡ ಅಧಿಸೂಚನೆಯ ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಪ್ರಕಟಿಸಲಾಗಿರುವ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವುದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿದೆ. ಈ ಬಗ್ಗೆ ಮೇಲ್ಕಂಡ ಕಾಯ್ದೆ ವಿಧಿ 28(3)ರ ಪ್ರಕಾರ ಆದೇಶ ಹೊರಡಿಸಲಾಗಿದೆ.

ಶ್ರೀ ಎನ್. ಸಂಪಂಗಿ : ಉತ್ತರವೇನೋ ಒದಗಿಸಿದ್ದಾರೆ. Date ಮಾತ್ರ change ಮಾಡಿದ್ದಾರೆ. ಮೂರು ವರ್ಷಗಳ ಹಿಂದೆ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಈಗಲೂ ಅದೇ ಉತ್ತರ ಕೊಟ್ಟಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಖಾಸಗಿ ವಲಯದ ಮೂಲಕ 79 ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳನ್ನು ಎಷ್ಟು ಮಾಡಿದ್ದೀರಿ? ಎಲ್ಲಾ ವಿವರ ಕೊಡಿ. ಇದರ ಜೊತೆಗೆ ರೂ. 21,094,07 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಸುಮಾರು 49,770 ಜನರಿಗೆ ಉದ್ಯೋಗ ದೊರಕಲಿದೆ ಎಂದು ಹೇಳಿದ್ದೀರಿ. ಇನ್ನು ದೊರಕಲಿದೆ, ಇನ್ನೂ ದೊರಕಿಲ್ಲ. ವಿಶ್ವೇಶ್ವರಯ್ಯನವರು ಹುಟ್ಟಿದೂರು. ಇಡೀ ಕರ್ನಾಟಕದಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಿದಂಥ ಮಹನೀಯರ ಒಂದು ಜಿಲ್ಲೆ. ನೀವು ಇನ್ನೂ ಸಿಗಲಿದೆ, ದೊರಕಲಿದೆ ಎಂದು ಉತ್ತರ ಕೊಟ್ಟಿದ್ದೀರಿ. ಬಾಗೇಪಲ್ಲಿಯಲ್ಲಿ ನೀವು ಈಗಾಗಲೇ 192 ಎಕರೆ ಅಕ್ವೈರ್ ಮಾಡಿ, 1 ಎಕರೆಗೆ 15 ಲಕ್ಷ ರೂಪಾಯಿಗಳಂತೆ 16 ಕೋಟಿ 72 ಲಕ್ಷ ರೂಪಾಯಿಗಳನ್ನು ಅಧಿಸೂಚಿತ ಖಾತೆದಾರರಿಗೆ ಹಣ ಕೊಟ್ಟುಬಿಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ಹಣ ಪಾವತಿಸಿದ ಮೇಲೆ ಇಂಡಸ್ಟ್ರಿಗಳ ಶೆಡ್‌ಗಳನ್ನಾಗಲಿ ಸೈಟ್‌ಗಳನ್ನಾಗಲಿ ಮಾಡುವುದಕ್ಕೆ ಏಕೆ ಪ್ರಾರಂಭಿಸಿಲ್ಲವೆಂದು ತಮ್ಮನ್ನು ಕೇಳಬಯಸುತ್ತೇನೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ನನಗೆ ಮಾಹಿತಿ ಕೊಡಿ.

ಶ್ರೀ ಮುರುಗೇಶ್ ನಿರಾಣಿ : ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ರೂ. 21,094,07 ಕೋಟಿ ಮೊತ್ತದ ಬಂಡವಾಳ ಹೂಡಿಕೆಯಾಗಲಿದ್ದು ಅಲ್ಲಿ ಸುಮಾರು 79 ಕೈಗಾರಿಕೆಗಳು ಬರುತ್ತಿದ್ದು ಇದರಿಂದ ಸುಮಾರು 49,770 ನಿರುದ್ಯೋಗ ಯುವಕ

ಯುವತಿಯರಿಗೆ ಕೆಲಸ ಸಿಗುವಂತದ್ದು ಇದೆ. ಅದು ಬೇರೆ ಬೇರೆ ಹಂತದಲ್ಲಿರುವುದರಿಂದ ಆ ಕಾರ್ಖಾನೆಗಳು ಪೂರ್ತಿಯಾದ ಮೇಲೆ ಉದ್ಯೋಗ ಕೊಡಲಿಕ್ಕಾಗುತ್ತದೆ ವಿನಾ ಈಗ ಕೊಡುವುದಕ್ಕಾಗುವುದಿಲ್ಲ. ಇದರ ಜೊತೆಗೆ ಡಾ॥ ಸರೋಜಿನಿ ಮಹಿಷಿ ವರದಿಯ ಹಿನ್ನೆಲೆಯಲ್ಲಿ ಅಲ್ಲಿರುವ ಸ್ಥಳೀಯರಿಗೆ ಕನಿಷ್ಟ 85% ಆದರೂ ಉದ್ಯೋಗ ಕೊಡಲಿಕ್ಕೆ ಸೂಚಿಸಿದ್ದೇವೆ. ಈಗಾಗಲೇ 16 ಕೋಟಿ ರೂಪಾಯಿಯಷ್ಟು ರೈತರಿಗೆ ಪರಿಹಾರ ಕೊಟ್ಟಿದ್ದೇವೆ. ಈಗ ಆ ಭೂಮಿ ನಮ್ಮ KIADB ವಶದಲ್ಲಿರುವುದರಿಂದ ಅದನ್ನು ತಕ್ಷಣವೇ ಅಭಿವೃದ್ಧಿಪಡಿಸುವ ಕೆಲಸವನ್ನು ನಾವು ಕೈಗೆತ್ತಿಕೊಳ್ಳುತ್ತಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಏನೆಂದರೆ, ವಿಶ್ವೇಶ್ವರಯ್ಯನವರು ಹುಟ್ಟಿದಂಥ ನಾಡು. ಅವರು 'Industrialize or perish' ಎಂದು ಹೇಳಿದರು. ಬಹುಶಃ ಅವರು ಬಾಗೇಪಲ್ಲಿಯನ್ನು ನೋಡಿ ಆ ಮಾತು ಹೇಳಿರಬೇಕೆಂದು ಕಾಣುತ್ತದೆ. ಆ ಸಂದರ್ಭದಲ್ಲಿ ಏಕೆ ಬರಲಿಲ್ಲ ? ಇದಕ್ಕೆ ಪೂರಕವಾಗಿ ನಾನೊಂದು ಪ್ರಶ್ನೆ ಕೇಳುತ್ತೇನೆ. ನನಗೂ ಕೂಡ ಈ ಬಗ್ಗೆ ಸ್ವಲ್ಪ ಗೊತ್ತಿದೆ. ಬಹುಶಃ ಕೈಗಾರಿಕೆಗಳಿಗೆ ಭೂಮಿ ಕೊಡುವುದಕ್ಕೆ ಅಕ್ಟ್ಯೆಜಿಷನ್ ಪ್ರಾರಂಭವಾಗಿದ್ದು 2005–06. ಏಳು ವರ್ಷಗಳಾದರೂ ಇನ್ನೂ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ನೀವು ಆ ಲ್ಯಾಂಡ್ ಪೊಸೆಷನ್ ಕೊಡಲಿಲ್ಲವೆಂದು ಹೇಳಿದರು. ಅದು ಹೇಗೆ ? ಇನ್ನು ನಿಮಗೆ ಎಷ್ಟು ವರ್ಷ ಬೇಕು ? ನೀವು ಅಂದಾಜಿನಲ್ಲಿ ಇಷ್ಟು ಕೈಗಾರಿಕೆಗಳು ಬರುತ್ತವೆ ಇಷ್ಟು ಪ್ರಮಾಣದಲ್ಲಿ ಉದ್ಯೋಗಗಳು ಬರುತ್ತವೆಂದು ಹೇಳೀದಿರಿ. ಆರು ವರ್ಷಗಳಾದ ಮೇಲೆ ಆ ಕಂಪನಿಗಳು ಮುಚ್ಚಿ ಹೋಗಿವೆಯೋ ಏನೋ ? ದಯಮಾಡಿ ಇದಕ್ಕೆ ಏನಾದರೂ ಮಾಡಿ ಒಂದು ಟೈಂ ಲಿಮಿಟ್ ಮಾಡಬೇಕು. ಇಲ್ಲಿ ರೈತರ ವಿರೋಧವಿಲ್ಲ. ರೈತರು ಕೊಡುವುದಕ್ಕೆ ತಯಾರಿದ್ದಾರೆ. ರೈತರಿಗೆ ದುಡ್ಡು ಕೊಟ್ಟಿಲ್ಲ, ಕೈಗಾರಿಕೆಗಳು ಬಂದಿಲ್ಲ, ಇದು ಪ್ರಶ್ನೆ.

ಡಾ॥ ಎಂ.ಸಿ. ಸುಧಾಕರ್ : ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಮಾಹಿತಿ ಕೊಟ್ಟಿದ್ದಾರೆ. ಜಿಲ್ಲಾ ಮಾಹಿತಿ ಕೊಟ್ಟಿರುವುದರಲ್ಲಿ ಸರಿಯಾದ ಮಾಹಿತಿ ಕೊಟ್ಟಿಲ್ಲ. ಚಿಂತಾಮಣಿಯಲ್ಲಿ ಒಂದೂವರೆ ವರ್ಷದ ಹಿಂದೆ ಎರಡು ಜಾಗದಲ್ಲಿ ಒಂದು ಜಾಗದಲ್ಲಿ 598 ಎಕರೆ ಮತ್ತೊಂದು 800 ಎಕರೆಗೆ ಪ್ರಿಲಿಮಿನರಿ ನೋಟಿಫಿಕೇಷನ್ ಆಗಿತ್ತು. ಮಸ್ತೇನಹಳ್ಳಿ ಎನ್ನುವ ಗ್ರಾಮದಲ್ಲಿ 300 ಕ್ಕೂ ಹೆಚ್ಚು ಎಕರೆ ಸರ್ಕಾರಿ ಜಾಗವಿದೆ. ಅಲ್ಲಿ ರೈತರ ಜೊತೆಗೆ ಅಂತಿಮವಾಗಿ ಚರ್ಚೆಯಾಗಿ ಅವರು ಕೊಡಲಿಕ್ಕೆ ತಯಾರಿದ್ದಾರೆ. ಅವತ್ತಿನಿಂದ ಇವತ್ತಿನವರೆಗೆ

ಏನು ಪ್ರಕ್ರಿಯೆ ಆಗಲಿಲ್ಲ. ನಂತರ ಇನ್ನೊಂದು ಸ್ಥಳದಲ್ಲಿ 800 ಎಕರೆ ಇರುವ ಜಾಗದಲ್ಲಿ 600 ಎಕರೆ ಸರ್ಕಾರಿ ಜಾಗವಿದೆ. ಅಂದಿನಿಂದ ಇಂದಿನವರೆಗೆ ನಾನು ಸುಮಾರು 20–25 ಸಾರಿ ಕಛೇರಿಗಳಿಗೆ ಅಲೆದಿದ್ದೇನೆ. ಏನು ಮಾಹಿತಿ ಇಲ್ಲ. ಸನ್ಮಾನ್ಯ ಮಂತ್ರಿಗಳಿಗೂ ಹೇಳಿದೆ ಅವರು ಸಭೆ ಕರೆಯುತ್ತೇನೆಂದು ಹೇಳಿದರು. ನಾನು ಒಮ್ಮೆ ಫೋನು ಮಾಡಿದರೆ ಯಾರೋ ಮಾತನಾಡುತ್ತಾರೆಂದರು. ಈ ರೀತಿಯಾಗಿದೆ. ಇದಕ್ಕೆ ಕಾರಣ ಹೇಳುತ್ತೇನೆ ದಯಮಾಡಿ ಕೇಳಿ. ಇಲ್ಲಿ ಸ್ವಾಧೀನಪಡಿಸಿಕೊಂಡ ಜಾಗಕ್ಕೆ ಕೊಡಬೇಕಾಗಿರುವ ಮೊತ್ತ ಏನು ಇದೆ, ರೈತರ ಜಮೀನು ಕಡಿಮೆಯಿದೆ ಅಧಿಕಾರಿಗಳು ಇಲ್ಲಿ ದುಡ್ಡು ಸಿಗುವುದಿಲ್ಲವೆನ್ನುವ ಉದ್ದೇಶದಿಂದ ಇದನ್ನು ಕೈಬಿಡುತ್ತಿದ್ದಾರೆ. ನಮಗೆ ನೀರಾವರಿ ವ್ಯವಸ್ಥೆಯಿಲ್ಲ, ಸಾವಿರಾರು ಅಡಿಗಳಿಂದ ನಾವು ನೀರು ತೆಗೆಯಬೇಕು, ಕನಿಷ್ಠ ಅಲ್ಲಿರುವ ಅವಿದ್ಯಾವಂತರಿಗೆ ಉದ್ಯೋಗ ಕಲ್ಪಿಸಿಕೊಡುವ ಪ್ರಯತ್ನಕ್ಕೂ ಸರ್ಕಾರದಿಂದ ಸರಿಯಾದ ಸ್ಪಂದನೆ ಸಿಗುತ್ತಿಲ್ಲ. ಹೀಗಿರುವಾಗ ನಾವು ಯಾವ ರೀತಿ ಕೆಲಸ ಮಾಡಬೇಕು ?

ಅಧ್ಯಕ್ಷರು : ಸಂಪಂಗಿಯವರು ಕೇಳಿದ ನಂತರ ನೀವು ಉತ್ತರ ಕೊಡಿ.

ಶ್ರೀ ಯು.ಟಿ. ಖಾದರ್ : ನಮ್ಮ ಮಂಗಳೂರಿನಲ್ಲಿ SEZ ಬಗ್ಗೆನೂ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಸಂಪಂಗಿಯವರನ್ನು ನಾನು ಕರೆದಿದ್ದೇನೆ. ನೀವು ಮಂಗಳೂರನ್ನು ಬಾಗೇಪಲ್ಲಿಗೆ ಸೇರಿಸಿ ಬಿಡುತ್ತೀರಾ ? ಅವರು ಎಲ್ಲಾ ಕೇಳಲಿ. ನಂತರ ನೀವು ಎಲ್ಲದಕ್ಕೂ ಒಟ್ಟಿಗೆ ಉತ್ತರ ಕೊಡಿ. ನೀವು ಕೇಳಿ.

ಶ್ರೀ ಎನ್. ಸಂಪಂಗಿ : ಈ ಉತ್ತರ ಸದನದಲ್ಲಿ ಮೂರನೇ ಸಾರಿ ಬರುತ್ತಿದೆ. ನಾವು ಚುನಾಯಿತರಾಗಿ 2008 ರಲ್ಲಿ ಬಂದ ನಂತರ ಇದೇ ಪ್ರಶ್ನೆಗೆ ಇದೇ ಉತ್ತರ ಕೊಟ್ಟಿದ್ದರು. ಇದು ಮೂರನೇ ಸಾರಿ ಬರುತ್ತಿದೆ. ನನಗೆ ಮತ್ತೆ ಇದೇ ಉತ್ತರ ಬೇಕಾಗಿಲ್ಲ. ಏಕೆಂದರೆ, ನಂಜುಂಡಪ್ಪನವರ ವರದಿ ಪ್ರಕಾರ ಬಹಳ ಅತಿ ಹಿಂದುಳಿದ ಪ್ರದೇಶವೆಂದು ಸರ್ಕಾರ ಗುರುತಿಸಿದೆ. ಇವತ್ತು ಅಲ್ಲಿ ಅದನ್ನು ಮುಂದುವರಿಸುವುದಕ್ಕೆ ಸರ್ಕಾರಕ್ಕೆ ಆಸಕ್ತಿಯಿಲ್ಲವೆಂಬುದನ್ನು ತೋರಿಸುತ್ತದೆ. ಅಲ್ಲಿ ನಿರುದ್ಯೋಗಿ ಯುವಕರುಗಳು ವರ್ಷಕ್ಕೆ ಒಂದು ಸಾವಿರದಿಂದ ಎರಡು ಸಾವಿರ ಜನ ಬೆಂಗಳೂರು ಕಡೆ ವಲಸೆ ಬರುತ್ತಿದ್ದಾರೆ. ನ್ಯಾಷನಲ್ ಹೈವೇ ಯಲ್ಲಿರುವ ಜಾಗ ಈಗಾಗಲೆ ಗುರುತಿಸಿದ್ದೀರಿ. ಅದಕ್ಕೆ ಹಣ ಪಾವತಿ ಮಾಡಿದ್ದೀರಿ ಎಂದು ಸುಳ್ಳು ಮಾಹಿತಿ ಕೊಟ್ಟಿದ್ದೀರಿ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಮೊನ್ನೆ ನಾನು ಜಿಲ್ಲಾಧಿಕಾರಿಗಳಿಗೆ ಒಂದು ಮೀಟಿಂಗ್ ಕರೆಯಿರಿ, ಆ ರೈತರನ್ನು ಕರೆದು

ಮಾತನಾಡಿ ಅವರಿಗೆ ಹಣ ಪಾವತಿಸಿ ಮತ್ತೆ ಪ್ರಾರಂಭಿಸಿ ಎಂದು ಹೇಳಿದ್ದೇನೆ. ನಿಮಗೆ ನಿಮ್ಮ ಇಲಾಖೆಯವರು ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ನನಗೆ ಅನ್ನಿಸುತ್ತದೆ. ಆದರೆ, ನಿಮ್ಮ ಪ್ರಕಾರವಾಗಿ ಇದು ಸರಿ ಎನ್ನುವುದಾದರೆ, ಎಷ್ಟು ದಿನದಲ್ಲಿ ನೀವು ಪ್ರಾರಂಭ ಮಾಡುತ್ತೀರಾ ? ನನಗೆ ಹೇಳಿ.

ಶ್ರೀ ಮುರುಗೇಶ್ ನಿರಾಣಿ : ಕರ್ನಾಟಕದಲ್ಲಿ ಹೋದ ವರ್ಷ ಜೂನ್ 2010–11ರಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಅತ್ಯಂತ ಯಶಸ್ವಿಯಾಗಿ ಮಾಡಿ ಇಡೀ ಜಗತ್ತಿನ ನಕ್ಷೆಯಲ್ಲಿಯೇ ಕರ್ನಾಟಕದ ಕೈಗಾರಿಕೆಗಳ ಬಗ್ಗೆ ಗುರುತು ಮಾಡಿಕೊಡುವುದಲ್ಲದೆ ಅವತ್ತು ಅಂದಾಜು ಐದು ಲಕ್ಷ ಕೋಟಿ ರೂಪಾಯಿಗಳಷ್ಟು ಬಂಡವಾಳ, ಅಂದಾಜು 387 ಕೈಗಾರಿಕೆಗಳ ಯೋಜನೆಗಳು, ಅಂದಾಜು ಎಂಟು ಲಕ್ಷ ನಿರುದ್ಯೋಗ ಯುವಕ ಯುವತಿಯರಿಗೆ ಕೆಲಸ ಸಿಗುವಂಥದ್ದಕ್ಕೆ ನಾವು MOU ಗಳಿಗೆ ಸಹಿ ಮಾಡಿದ್ದೇವೆ. ಒಂದೂವರೆ ವರ್ಷದಲ್ಲಿ ಅಂದಾಜು 224 ಯೋಜನೆಗಳು ಭೂಮಿ ಪೂಜೆ ಹಂತದಲ್ಲಿ ಅನುಷ್ಠಾನಗೊಳ್ಳುತ್ತಿವೆ. ಇದೇ ವರ್ಷದಲ್ಲಿ ಅಂದಾಜು 28 ಯೋಜನೆಗಳು ಭೂಮಿ ಪೂಜೆ ಮಾಡಿಕೊಂಡಿವೆ.

ಶ್ರೀ ಎನ್. ಸಂಪಂಗಿ : ನನಗೆ ಇಡೀ ಕರ್ನಾಟಕದಲ್ಲಿ ಆಗಿರುವ ಬಗ್ಗೆ ಮಾಹಿತಿ ಬೇಡ. ನನಗೆ ನನ್ನ ಕ್ಷೇತ್ರದಲ್ಲಿ ಆಗಿರುವ ಬಗ್ಗೆ ಹೇಳಿ.

ಶ್ರೀ ಮುರುಗೇಶ್ ನಿರಾಣಿ : ನಿಮ್ಮ ವಿಷಯಕ್ಕೆ ಬರುತ್ತಿದ್ದೇನೆ. ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಎನ್. ಸಂಪಂಗಿ : ನನಗೆ ಕರ್ನಾಟಕದ ಬಗ್ಗೆ ಉತ್ತರ ಬೇಕಾಗಿಲ್ಲ. ನನ್ನ ಕ್ಷೇತ್ರ ನನ್ನ ಜಿಲ್ಲೆಯಲ್ಲಿರತಕ್ಕಂಥ ಇಂಡಸ್ಟ್ರಿಗಳನ್ನು ಯಾವತ್ತು ಪ್ರಾರಂಭಿಸುತ್ತೀರಿ ? ರಾಮನಗರ ಮತ್ತು ಚಿಕ್ಕಬಳ್ಳಾಪುರ ಎರಡೂ ಒಂದೇ ಸಾರಿ ವಿಭಜನೆಯಾಗಿರುವಂಥ ಜಿಲ್ಲೆಗಳು ರಾಮನಗರ ಇವತ್ತು ಬೃಹತ್ತಾಗಿ ಬೆಳೆದಿದೆ. ಆದರೆ, ಈ ಜಿಲ್ಲೆಯಲ್ಲಿ ಒಂದು ಇಂಡಸ್ಟ್ರಿ ಸಹ ಓಪನ್ ಮಾಡುವುದಕ್ಕಾಗುತ್ತಿಲ್ಲ.

ಅಧ್ಯಕ್ಷರು : ಅವರು ಉತ್ತರ ಹೇಳಲಿ ಬಿಡಿ.

ಶ್ರೀ ಮುರುಗೇಶ್ ನಿರಾಣಿ : ನನಗೆ ಪೂರ್ತಿ ಉತ್ತರ ಹೇಳಲಿಕ್ಕೆ ಅವಕಾಶ ಕೊಡಿ. ಈಗಾಗಲೇ 28 ಯೋಜನೆಗಳು ಈ ವರ್ಷದಲ್ಲಿ ಮುಗಿದಿವೆ. ಈಗಾಗಲೇ ಅಲ್ಲಿ ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ, ಬೇರೆ ಬೇರೆ ಲ್ಯಾಂಡ್ ಅಕ್ವಿಜಿಷನ್ ಮಾಡುವಂಥ ಸಂದರ್ಭದಲ್ಲಿ

ಅಲ್ಲಿರುವಂಥ ಎಲ್ಲಾ ನಮ್ಮ ಪ್ರತಿ ಪಕ್ಷದ ನಮ್ಮ ಸ್ನೇಹಿತರು ಎಲ್ಲರೂ ಕೂಡಿ ಸಹಕಾರ ಮಾಡಿದಾಗ ಮಾತ್ರ ಬೇಗನೆ ಕೈಗಾರಿಕೆಗಳು ಬರುವುದಕ್ಕೆ ಸಾಧ್ಯವಿದೆ. 60 ವರ್ಷಗಳ ಇತಿಹಾಸದಲ್ಲಿ ಮತ್ತು ಬೇರೆ ರಾಜ್ಯಗಳಲ್ಲಿ ಆಗದೇ ಇರುವಂಥದ್ದನ್ನು ನಾವು ಲ್ಯಾಂಡ್ ಬ್ಯಾಂಕ್ ಕಾನ್ಸೆಪ್ಟ್‌ದಲ್ಲಿ ಭೂಮಿಯನ್ನು ಅಕ್ವಿಜಿಷನ್ ಮಾಡಿಕೊಂಡು ಅಂದಾಜು ಒಂದು ಲಕ್ಷದಷ್ಟು ಭೂಮಿಯನ್ನು ಗುರುತಿಸಿಟ್ಟಿದ್ದೇವೆ. ಅದರಲ್ಲಿ 86 ಸಾವಿರ ಎಕರೆಯಷ್ಟು ಭೂಮಿಯನ್ನು ಪ್ರಲಿಮಿನರಿ ನೋಟಿಫಿಕೇಷನ್ ಮಾಡಿದ್ದೇವೆ. 38 ಸಾವಿರ ಎಕರೆ ಭೂಮಿಯನ್ನು ಫೈನಲ್ ನೋಟಿಫಿಕೇಷನ್ ಆಗಿದೆ. ಅದರಲ್ಲಿ ತಮ್ಮ ಜಿಲ್ಲೆಯೂ ಒಂದು. ಅದರಲ್ಲಿ ಈಗಾಗಲೇ 21 ಸಾವಿರ ಕೋಟಿ ರೂಪಾಯಿಗಳಷ್ಟು 79 ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಯೋಜನೆಗಳು ಬರುತ್ತಿವೆ. ಅವೆಲ್ಲವು ಬೇರೆ ಬೇರೆ ಹಂತದಲ್ಲಿವೆ. ಅದರಲ್ಲಿ ವಿವರವಾಗಿ ಹೇಳುವುದಾದರೆ 16 ಕೋಟಿ ರೂಪಾಯಿ ಏನು ಪರಿಹಾರ ಕೊಟ್ಟಿದ್ದೇವೆ, ಅದಕ್ಕೆ ಹೆಚ್ಚಿನ ಮಾಹಿತಿ ಅಥವಾ ಅದರಲ್ಲಿ ಇನ್ನೇನಾದರೂ ಲೋಪದೋಷಗಳಿದ್ದರೆ ಇನ್ನು ಹೆಚ್ಚಿನ ಪರಿಹಾರ ರೈತರಿಗೆ ಕೊಡಬೇಕಾಗಿದ್ದಲ್ಲಿ ನಾವು ಸದಸ್ಯರ ಜೊತೆಗೆ ಕುಳಿತುಕೊಂಡು ಆ ಕೆಲಸ ಮಾಡುತ್ತೇನೆ. ಇನ್ನೊಂದು ವಿಚಾರ ಏನೆಂದರೆ, .. ನಾನು ಪೂರ್ತಿ ವಿಚಾರ ಹೇಳುತ್ತೇನೆ.

(ಗೊಂದಲ)

ಶ್ರೀ ಎನ್. ಸಂಪಂಗಿ : ಏಕೆ ಅವರು ಈ ರೀತಿ ಉತ್ತರ ಕೊಡುತ್ತಾರೆ ? ಅವರು ಈ ರೀತಿ ಹೇಳಿದರೆ ನಾವು ಸದನದ ಬಾವಿಗೆ ಬರಬೇಕಾಗುತ್ತದೆ. ಅವರು ಏಕೆ ಈ ರೀತಿ ಹೇಳುತ್ತಾರೆ ?

ಶ್ರೀ ಮುರುಗೇಶ್ ನಿರಾಣಿ : ನಾನು ಪೂರ್ತಿ ಉತ್ತರ ಹೇಳಿಬಿಡುತ್ತೇನೆ. ಪೂರ್ತಿ ಉತ್ತರ ಹೇಳುವುದಕ್ಕೆ ಬಿಡಲ್ಲ ಎಂದರೆ ಹೇಗೆ ? ಉತ್ತರ ಪೂರ್ತಿ ಹೇಳುವವರೆಗೆ ನೀವು ಕೇಳುತ್ತಿಲ್ಲವಲ್ಲ ?

ಅಧ್ಯಕ್ಷರು : ಉತ್ತರ ಹೇಳುತ್ತಾರೆ ಕುಳಿತುಕೊಳ್ಳಿ. ನೀವು ಅವರೊಟ್ಟಿಗೆ ಚರ್ಚೆ ಮಾಡಿ.

(ಗೊಂದಲ)

ಶ್ರೀ ಎನ್. ಸಂಪಂಗಿ : ಕರ್ನಾಟಕ ರಾಜ್ಯದ ಮಾಹಿತಿ ನನಗೆ ಬೇಕಾಗಿಲ್ಲ. ನನ್ನ ಕ್ಷೇತ್ರದ ಬಗ್ಗೆ ಮಾಹಿತಿ ಕೊಡಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಇಂಡಸ್ಟ್ರಿ ಈಗ ಶುರು ಮಾಡುತ್ತೇವೆ, ಇಂಥ ಇಂಡಸ್ಟ್ರಿ ಇಂಥ ದಿವಸ ಶುರು ಮಾಡುತ್ತೇವೆಂದು ಹೇಳಲಿ. ಪಾಪ ಅವರು ಇಷ್ಟು ದಿವಸ ಕಾಯುತ್ತಿದ್ದಾರೆ ನೀವು ಉತ್ತರ ಹೇಳದಿದ್ದರೆ ಹೇಗೆ ?

(ಗೊಂದಲ)

ಅಧ್ಯಕ್ಷರು : ಉತ್ತರ ಹೇಳುವುದಕ್ಕೆ ಬಿಡದಿದ್ದರೆ ಹೇಗೆ ಅವರು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : KIADB ಯಿಂದ ಭೂಮಿ ಸ್ವಾಧೀನ ಪಡಿಸಿಕೊಂಡು ನಂತರ ಕೈಗಾರಿಕೆಗಳಿಗೆ ಕೊಟ್ಟಾಗ ಅವರು ತಮ್ಮ ಇಂಡಸ್ಟ್ರಿ ಶುರು ಮಾಡುತ್ತಾರೆ. ಅದಕ್ಕೆ ಬೇಕಾದ ಪೂರಕವಾದ ಸಿದ್ಧತೆಗಳನ್ನು ಮಾಡಿ ಕೊಡುತ್ತಾರೆ. ನಿಖರವಾಗಿ ಇಂಥ ದಿವಸ ಇಂಡಸ್ಟ್ರಿ ಶುರು ಮಾಡುತ್ತಾರೆಂದು ಹೇಗೆ ಹೇಳುವುದಕ್ಕೆ ಸಾಧ್ಯ ? ನೀವು ಅನುಭವ ಇರುವವರು ಇದ್ದೀರಿ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಹೇಳಿ ಮುಗಿಸಲಿ. ಪ್ರಶ್ನೋತ್ತರದಲ್ಲಿ ಇದೇನಿದು ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಅವರು ಕಟ್ಟಡ ಕಟ್ಟಿದ ನಂತರ ಯಂತ್ರೋಪಕರಣಗಳನ್ನು ತಂದ ನಂತರ ಅವರು ಶುರು ಮಾಡುತ್ತಾರೆ. ಇದೇನಿದು ಪ್ರಶ್ನೆ ಕೇಳುವಾಗ ಒಂದು ತರ್ಕ ಇರಬೇಕು ಅಲ್ಲವೆ ? ತರ್ಕರಹಿತವಾಗಿ ಪ್ರಶ್ನೆ ಕೇಳಿದರೆ ಹೇಗೆ?

ಡಾ॥ ಎಂ.ಸಿ. ಸುಧಾಕರ್ : ಕೆಲವು ಕಡೆ ರೈತರು ಭೂಮಿ ಕೊಡುವುದಕ್ಕೆ ತಯಾರಿರುವುದಿಲ್ಲ ಅಂಥ ಕಡೆ ಡಿಲೇಯಾಗಿರುತ್ತದೆ. ಆದರೆ, ಇಲ್ಲಿ ಭೂಮಿ ಕೊಡುವುದಕ್ಕೆ ತಯಾರಿದ್ದರೂ ಮಾಡಿಲ್ಲ. ಎಲ್ಲಿ ಸುಲಭವಾಗಿ ಮಾಡಬಹುದೋ ಅಲ್ಲಿ ಮಾಡಲಿಕ್ಕೆ ತಯಾರಿಲ್ಲ. ಬೆಂಗಳೂರಿಗೆ ಸಮೀಪವಾಗಿರುವ ಪ್ರದೇಶವೆಂದು ನಾವು ಆಗಿನಿಂದಲೂ ಹೇಳುತ್ತಿದ್ದೇವೆ. ಅದನ್ನು ತೆಗೆದುಕೊಳ್ಳಿ ಎಂದು ಹೇಳುವುದಕ್ಕೆ ಇವರಿಗೆ ಜವಾಬ್ದಾರಿ ಇಲ್ಲವೆಂದರೆ ನಾವು ಏನು ಮಾಡಬೇಕು ?

ಅಧ್ಯಕ್ಷರು : ಅವರು ಉತ್ತರ ಹೇಳಲಿ ನೋಡೋಣ. ನೀವು ಬಾಗೇಪಲ್ಲಿಗೆ

ಸೀಮಿತವಾಗಿ ಹೇಳಿ. ಚಿಕ್ಕಬಳ್ಳಾಪುರ ಜಿಲ್ಲೆಯ ಬಗ್ಗೆ ಪೂರ್ತಿಯಾಗಿ ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಕೈಗಾರಿಕಾ ಸಚಿವರು ಉತ್ತರ ಕೊಡುವುದಕ್ಕೆ ಬಹಳ ಸಮರ್ಥರಿದ್ದಾರೆ. ಅವರೇನಾದರೂ ಸ್ವಲ್ಪ ದಾರಿ ತಪ್ಪಿದಂತಹ ಸಂದರ್ಭದಲ್ಲಿ ಅದನ್ನು correct ಮಾಡಲಿಕ್ಕೆ Parliamentary Affairs Minister ಇರುತ್ತಾರೆ. ನಮ್ಮ ಸ್ನೇಹಿತರೇನದರು Parliamentary Affairs Minister ಆಗಿ ಬಿಟ್ಟಿದ್ದಾರೆಯೇ ಎಂದು ನನಗೆ ಒಂದು ಅನುಮಾನ ಬಂದಿದೆ. ಏಕೆಂದರೆ, ಎಲ್ಲಾದಕ್ಕೂ ನೀವೇ ಉತ್ತರ ಕೊಡುತ್ತಿದ್ದೀರಿ. ಕೈಗಾರಿಕಾ ಮಂತ್ರಿಗಳು ಕೈಗಾರಿಕೆ ಬಗ್ಗೆ ಉತ್ತರ ಕೊಡುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ : ಎಲ್ಲದಕ್ಕೂ ನಾನು ಉತ್ತರ ಕೊಡುತ್ತಿಲ್ಲ. ಈ ಪ್ರಶ್ನೋತ್ತರ ಕಾಲದಲ್ಲಿ ಮುಂದೆ ನಮ್ಮ ಪ್ರಶ್ನೆಗಳಿವೆ. ಆದ್ದರಿಂದ, ಈ ಒಂದು ಹಿನ್ನೆಲೆಯಲ್ಲಿ ಹೇಳಿದ್ದೇನೆ. ತಾವು ಕೂಡ ಸಚಿವರಾಗಿ ಕೆಲಸ ಮಾಡಿದ್ದೀರಿ. Industry ಯಾವಾಗ ಪ್ರಾರಂಭ ಮಾಡುತ್ತೇವೆಂದು ಉತ್ತರ ಹೇಳುವುದಕ್ಕಾಗುತ್ತದೆಯೇ ? ನೀವು ಹೇಳುವುದನ್ನೆಲ್ಲ ಕೇಳಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ ?

ಅಧ್ಯಕ್ಷರು : ವಿಷಯಾಂತರ ಬೇಡ.

ಶ್ರೀ ಟಿ. ಬಿ. ಜಯಚಂದ್ರ : ನೀವು ದಾರಿ ತಪ್ಪಿಸುತ್ತಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ : ನಿಮ್ಮ ಸದಸ್ಯರಿಗೆ ನೀವು ಗೈಡ್ ಮಾಡಿ.

ಅಧ್ಯಕ್ಷರು : ಮಾನ್ಯ ಜಯಚಂದ್ರರವರೆ, ದಯವಿಟ್ಟು ವಿಷಯಾಂತರ ಬೇಡ.

ಶ್ರೀ ಬಸವರಾಜ ಬೊಮ್ಮಾಯಿ : ವಿರೋಧ ಪಕ್ಷದ ನಾಯಕರಿಲ್ಲ ಅಂತ ಅವರ ಚಾನ್ಸ್ ನೀವು ತೆಗೆದುಕೊಂಡು ನಡೆಸುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ವಿಷಯಾಂತರ ಬೇಡ, ಅವರು ಉತ್ತರ ಮುಗಿಸಲಿ. ಮಾನ್ಯ ಸಚಿವರೆ, ಬಗೇಪಲ್ಲಿ ಹಾಗೂ ಚಿಕ್ಕಬಳ್ಳಾಪುರ ಅಷ್ಟಕ್ಕೆ ಸೀಮಿತವಾಗಿ ಉತ್ತರ ಹೇಳಿ.

ಶ್ರೀ ಮುರುಗೇಶ್ ನಿರಾಣಿ : ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತಿರುವಂತೆ ಅಲ್ಲಿ ಕೆ.ಐ.ಎ.ಡಿ.ಬಿ. ಅಕೌಂಟ್‌ನಿಂದ 16 ಕೋಟಿ ರೂಪಾಯಿಗಳಷ್ಟು ಈಗಾಗಲೇ ಪೇಮೆಂಟ್ ಆಗಿದೆ. ಇದರಲ್ಲಿ ಯಾವ ರೈತರಿಗೆ ಆಗಿಲ್ಲ ಎಂದು particular ಆದ ಮಾಹಿತಿಯನ್ನು ಕೊಡಲಿ. ಈ ಸಭೆ ಮುಗಿದ ಮೇಲೆ ಇವತ್ತು ಸಂಜೆಯೇ ಕುಳಿತು ಕೊಳ್ಳೋಣ. ಯಾವ

ರೈತರಿಗೆ ಪರಿಹಾರ ಸಿಕ್ಕಿಲ್ಲ ಎನ್ನುವುದನ್ನು specific ಆಗಿ ನನಗೆ ಹೇಳಿದರೆ ಅದನ್ನು ಸರಿ ಮಾಡಿಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಇವತ್ತು ಕೈಗಾರಿಕಾ ಸಲುವಾಗಿ ಭೂಮಿಯನ್ನು ಸ್ವಾಧೀನ ಮಾಡುತ್ತಿರುವುದರ ಬಗ್ಗೆ ನಮ್ಮ ಸರ್ಕಾರದ ನಿಲುವು ಬಹಳ ಸ್ಪಷ್ಟವಾಗಿದೆ. ಅದೇನೆಂದರೆ, ಯಾವುದೇ ರೀತಿಯಾಗಿ ಫಲವತ್ತಾದ ಜಮೀನುಗಳನ್ನು ರೈತರಿಂದ ಒತ್ತಾಯ ಪೂರ್ವಕವಾಗಿ ತೆಗೆದುಕೊಳ್ಳಬಾರದೆಂದು ಹಿಂದೆಯೂ ಹೇಳಿದ್ದೆವು. ಇವತ್ತೂ ಹೇಳುತ್ತಿದ್ದೇವೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಈಗಾಗಲೇ ಸರ್ಕಾರದ ಭೂಮಿ, ಬಂಜರು ಭೂಮಿ, ಡ್ರೈ ಲ್ಯಾಂಡ್, ಸಿಂಗಲ್ ಕ್ರಾಪ್ ಬೆಳೆಯುವಂತಹ ಜಾಗ ಎಲ್ಲಿದೆ ಎಂಬುದನ್ನು ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ identify ಮಾಡುವ ಕೆಲಸ ಈಗಾಗಲೇ ಆಗಿದೆ. ಇದರ ಎಲ್ಲಾ ಮಾಹಿತಿಗಳನ್ನು ಈಗಾಗಲೇ ತರಿಸಿಕೊಳ್ಳುತ್ತಿದ್ದೇವೆ. ಮಾಹಿತಿಗಳನ್ನು ತರಿಸಿಕೊಂಡ ಮೇಲೆ ಕೈಗಾರಿಕೆಗಳಿಗೆ ಯಾವುದು ಸೂಕ್ತವಿದೆ ಎನ್ನುವುದನ್ನು ತಿಳಿದು ಅವುಗಳೆಲ್ಲವನ್ನು ಲಿಸ್ಟ್ ಮಾಡಿದ್ದೇವೆ. ಪ್ರಥಮ ಹಂತದಲ್ಲಿ Government land acquisition ಮಾಡುವಂಥದನ್ನು ಮಾಡುತ್ತಿದ್ದೇವೆ. ಈ ಸಂಬಂಧ ಈಗಾಗಲೇ ತಮ್ಮ ಜೊತೆ last time ಚರ್ಚೆ ಮಾಡಿದ್ದೇವೆ. ಆ ಲಿಸ್ಟ್ ಕೂಡ ನಮ್ಮ ಹತ್ತಿರ ಇದೆ. ಕೆ.ಐ.ಎ.ಡಿ.ಬಿ. ಆಕ್ಟ್‌ನಲ್ಲಿ ಸ್ವಲ್ಪ ಬದಲಾವಣೆ ಮಾಡುತ್ತಿದ್ದೇವೆ. ಸ್ವ-ಇಚ್ಛೆಯಿಂದ ಭೂಮಿಯನ್ನು ಕೊಡುವುದಕ್ಕೆ ಯಾರು ಮುಂದೆ ಬರುತ್ತಾರೋ, ಅವರಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಅವರಿಗೆ ಪರಿಹಾರ ಕೊಡುವ ಕಾರ್ಯವನ್ನು ಮಾಡುತ್ತಿದ್ದೇವೆ. ನಿಮ್ಮ ಜಿಲ್ಲೆ ಹಾಗೂ ತಾಲ್ಲೂಕಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ಇದ್ದರೆ ನಮ್ಮ ಹಿರಿಯ ಅಧಿಕಾರಿಗಳನ್ನು ಕರೆಸಿ, ಇವತ್ತು ಸಂಜೆ ಅಥವಾ ನಾಳೆ ಬೆಳಿಗ್ಗೆಯೇ ನಿಮ್ಮ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮೂರು ವರ್ಷದ ಹಿಂದೆಯೇ ಇದೇ ಮಾತನ್ನು ಇಲ್ಲಿಯೇ ಕುಳಿತು ಹೇಳಿದ್ದರು. ಅವರಿಗೆ ನಾನೇನೂ ಬೇರೆ ಪ್ರಶ್ನೆಯನ್ನು ಕೇಳುವುದಿಲ್ಲ.

ಅಧ್ಯಕ್ಷರು : ನಿಮ್ಮ ಜೊತೆಯಲ್ಲಿ ಕುಳಿತು ಚರ್ಚೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಒಬ್ಬ ಮಂತ್ರಿಯಾಗಿ ಅವರು ಹೇಳತಕ್ಕಂಥ ಸುಳ್ಳು ಮಾಹಿತಿ ಸದನಕ್ಕೆ ಹೋಗಬಾರದು. 192 ಎಕರೆಗೆ 15 ಲಕ್ಷ ರೂಪಾಯಿಗಳು ಹಣ ಪಾವತಿ ಮಾಡಿದ್ದೇವೆಂದು ಮಾಹಿತಿ ಕೊಟ್ಟಿದ್ದಾರೆ. ಆದರೆ, ಇವತ್ತಿನವರೆಗೂ ಆ ಹಣ ಪಾವತಿ ಮಾಡಿಲ್ಲ. ಇನ್ನೊಂದು ವಿಚಾರ ಏನೆಂದರೆ, ಅಲ್ಲಿನವರು ಕೋರ್ಟ್‌ಗೆ ಹೋಗಿದ್ದಾರೆ.

ಆ ಜಾಗಕ್ಕೆ ಕೋರ್ಟಿನಿಂದ ಸ್ಟೇ ಆಗಿದೆ. ಆ ಸ್ಟೇ ಅನ್ನು ವೆಕೇಟ್ ಮಾಡುವುದಕ್ಕೆ ಇವರ ಕೈಯಲ್ಲಿ ಆಗುತ್ತಿಲ್ಲ. ಇವತ್ತು ಸುಳ್ಳು ಮಾಹಿತಿಯನ್ನು ಇಲ್ಲಿ ಕೊಟ್ಟಿದ್ದಾರೆ. ಕೋರ್ಟ್‌ನಲ್ಲಿರುವ ವಿಚಾರವನ್ನು ಸಹ ಈ ಮಾಹಿತಿಯಲ್ಲಿ ಹೇಳಿಲ್ಲ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಜಿಲ್ಲೆಯಲ್ಲಿ ಯಾವ್ಯಾವ ಕಾರ್ಖಾನೆಗಳು ಬರುವುದಕ್ಕೆ ಜಾಗವನ್ನು ಖರೀದಿ ಮಾಡಿದ್ದಾರೆಂಬ ಬಗ್ಗೆ ಅಥವಾ ರೈತರು ಕೊಟ್ಟಿರುವ ಜಾಗ ಮತ್ತು ಯಾವ್ಯಾವ ಕಾರ್ಖಾನೆಗಳು ಬರುತ್ತವೆಂದು ಹಾಗೂ ಈ ಒಂದು 16 ಕೋಟಿ ರೂಪಾಯಿಗಳನ್ನು ರೈತರಿಗೆ ಪಾವತಿ ಮಾಡಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ, ನಾನು ಕೇಳುವುದೇನೆಂದರೆ, ಯಾವತ್ತು ಕೈಗಾರಿಕೆಯನ್ನು ಪ್ರಾರಂಭ ಮಾಡುತ್ತೇವೆಂದು ಈಗ ಹೇಳಬೇಕು. ಏಕೆಂದರೆ, ಮೂರು ವರ್ಷಗಳಿಂದ ಪ್ರಾರಂಭ ಮಾಡುತ್ತೇವೆಂದು ಹೇಳುತ್ತಲೇ ಬರುತ್ತಿದ್ದಾರೆ. ಆದ್ದರಿಂದ, ಕನಿಷ್ಠ ಇಂತಹ ಒಂದು ತಾರೀಖಿನಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಲಿ. ಇವರ ಪ್ರಕಾರ ಹಣಪಾವತಿ ಮಾಡಿದ ಮೇಲೆ ಅಲ್ಲಿ ಏಕೆ ಈಗ ತೊಂದರೆಗಳು ಬರುತ್ತಿವೆ ? ಇವರು ಹಣ ಪವತಿ ಮಾಡಿಲ್ಲದಿರುವುದಕ್ಕೆ ತೊಂದರೆಯಾಗಿ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇವತ್ತು ನಿಜವಾಗಿಯೂ ಸದನದಲ್ಲಿ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಸರಿಯಾದಂಥ ಮಾಹಿತಿಯನ್ನು ಕೊಡಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಕಾಲದಲ್ಲಿ ಅವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಮಾಹಿತಿಯನ್ನು ಕೊಟ್ಟಿದ್ದಾರೆ. ಜೊತೆಗೆ ಇವತ್ತು ಸಂಜೆ ಅಥವಾ ನಾಳೆ ಬೆಳಿಗ್ಗೆ ಕೂರಿಸಿ ಅವರ ಹತ್ತಿರ ಮಾಹಿತಿಯನ್ನು ತೆಗೆದುಕೊಂಡು ಅದನ್ನು ಸರಿಪಡಿಸುತ್ತೇನೆ ಎಂದು ಮಾನ್ಯ ಸಚಿವರು ಈಗಾಗಲೇ ಹೇಳುತ್ತಿದ್ದಾರೆ. ಅದು ಬಿಟ್ಟು ಪ್ರಶ್ನೋತ್ತರ ವೇಳೆಯಲ್ಲಿಯೂ ಅರ್ಧ ಗಂಟೆ ಚರ್ಚೆ ಮಾಡುವ ಒಂದು ಪರಿಸ್ಥಿತಿ ಬಂದರೆ, ಪ್ರಶ್ನೋತ್ತರದ ಅರ್ಥವೇನು ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಟ್ಟಾಗಿ ಎದ್ದು ನಿಂತು ಕೊಂಡರೆ ಹೇಗೆ ? ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ : ನಿಮಗೆ ಪರಿಹಾರ important ಅಲ್ಲವೆ ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ.

ಶ್ರೀ ಎನ್. ಸಂಪಂಗಿ : ಯಾವ ದಿನಾಂಕದೊಳಗೆ ಮಾಡುತ್ತೇವೆಂಬುದರ ಬಗ್ಗೆ ಒಂದು ನಿರ್ದಿಷ್ಟವಾದ ದಿನಾಂಕವನ್ನು ನಿಗದಿ ಮಾಡಿ ಕೊಡಲಿ.

(ಗೊಂದಲ)

ಶ್ರೀ ಮುರುಗೇಶ್ ನಿರಾಣಿ : ಮಾನ್ಯ ಅಧ್ಯಕ್ಷರೆ, ಸದನ ಮುಗಿದ ಮೇಲೆ ಅಥವಾ ನಾಳೆ ಬೆಳಿಗ್ಗೆ ಅವರನ್ನು ಕರೆದು ಪರಿಹಾರ ಮಾಡುತ್ತೇವೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆ ನಿಮ್ಮನ್ನು ಕರೆದು ಪರಿಹಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಡಾ॥ ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಇನ್ನು ಕೇವಲ ಐದು ದಿವಸ ಸದನ ನಡೆಯುತ್ತದೆ. ಆದ್ದರಿಂದ, ನಮ್ಮ ಜಿಲ್ಲೆಯ ವಿಚಾರದ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನಾಳೆ ಬೆಳಿಗ್ಗೆ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಈ ವಿಷಯ ಇಲ್ಲಿಗೆ ಮುಗಿಯಿತು.

ಡಾ॥ ಎಂ.ಸಿ. ಸುಧಾಕರ್ : ಇನ್ನು ಐದು ದಿವಸದಲ್ಲಿ ನಮ್ಮ ಜಿಲ್ಲೆಯ ಎಲ್ಲ ಶಾಸಕರ ಒಂದು ಸಭೆಯನ್ನು ದಯವಿಟ್ಟು ಕರೆದು ಪರಿಹಾರ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಮುರುಗೇಶ್ ನಿರಾಣಿ : ನಾಳೆ ಬೆಳಿಗ್ಗೆ 10.00 ಗಂಟೆಗೆ ಕರೆಯುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ವಸಂತ ಬಂಗೇರವರದು ಇದೆ. ಮಾನ್ಯ ವಸಂತ ಬಂಗೇರರವರು ಇಲ್ಲ.

ಪ್ರಶ್ನೆ ಸಂಖ್ಯೆ 70(24)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಮುನಿಯಪ್ಪನವರೆ, ಕೇಳಿ.

ಅಂತರಿಕ್ಷ ಸಂಸ್ಥೆ (N.R.S.A.) ವರದಿ

71 (159) ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) :– ಮಾನ್ಯ ಜಲಸಂಪನ್ಮೂಲ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–